

**ಚಿಂತಾಮಣಿ ಕೊಡ್ಲೆಕೆರೆ**

ಕಲೆ: ಸಂತೋಷ್ ಸಸಿಹಿತ್ಲು

# ಅತಿಥಿ

ಅವರನ್ನು ನಾನು ಅಂದೇ ಮೊದಲಿಗೆ ನೋಡಿದ್ದು – ಒಂದು ವಿಚಾರ ಸಂಕಿರಣದಲ್ಲಿ. “ಕನ್ನಡ ನವ್ಯೋತ್ತರದ ಸ್ವರೂಪ’’ ಕುರಿತು ನಾನು ಆಶಯ ಭಾಷಣ ಮಾಡಬೇಕಿತ್ತು. ಮೂವತ್ತು ನಲವತ್ತು ಜನ ಆಸಕ್ತರು ಭಾಗವಹಿಸಿದ್ದ ಪುಟ್ಟ ಸಭೆ. ವೈವಿಧ್ಯಮಯ ಜೀವನ ಪದ್ಧತಿ ನಾಶವಾಗಿ ಇಡೀ ವಿಶ್ವವೇ ಒಂದು ಭಾಷೆ, ಒಂದು ಬಗೆಯ ನಡವಳಿಕೆ ಮುಂತಾಗಿ ಜಡ ಏಕತೆಗೆ ಜರುಗಿ, ಪುಟ್ಟ ಪುಟ್ಟ ಜನಾಂಗಗಳು ಸ್ವರೂಪ ಕಳೆದುಕೊಳ್ಳುತ್ತಿರುವುದರ ಅಪಾಯ ಮತ್ತು ಸಾಹಿತ್ಯದ ಕಾಳಜಿ ಹೀಗೆಲ್ಲ ಹದಿನೈದು ನಿಮಿಷಗಳು ಮಾತನಾಡಿರಬಹುದು. ಸಭೆಗೆ ತೀರ ಆಗಂತುಕರೆಂಬಂತೆ ಕಾಣುತ್ತಿದ್ದ ಒಬ್ಬ ವೃದ್ಧರು ನನ್ನನ್ನು ಆಕರ್ಷಿಸಿದರು. ಗಾಂಧಿ ಟೋಪಿ, ಶುಭ್ರ ಬಿಳಿ ಖಾದಿ ವಸ್ತ್ರ, ಹೊಳೆಯುವ ಕಣ್ಣುಗಳು. ಆ ಹಿರಿಯರು ಶ್ರದ್ಧಾವಂತ ವಿದ್ಯಾರ್ಥಿಯಂತೆ ನೋಟ್‌ಬುಕ್‌ನಲ್ಲಿ ಟಿಪ್ಪಣಿ ಬರೆದುಕೊಳ್ಳುತ್ತಾ ಕುಳಿತಿರುವುದು ಮೋಜೆನಿಸಿತು.

ಸಭೆಯಲ್ಲಿ ಭಾಷಣಗಳ ಬಳಿಕ ಪ್ರಶ್ನೆಗಳಿಗೆ ಕೆಲ ನಿಮಿಷಗಳ ಅವಕಾಶ ಕಲ್ಪಿಸಲಾಗಿತ್ತು. ನಮ್ಮ ಸ್ನೇಹಿತರೊಬ್ಬರ ಭಾಷಣದ ಬಳಿಕ ಅನಿರೀಕ್ಷಿತವಾಗಿ ಆ ಹಿರಿಯರು ಪ್ರಶ್ನೆ ಕೇಳಲು ಎದ್ದು ನಿಂತರು.

“ಭಾರತದ ಸ್ವಾತಂತ್ರ್ಯ ಹೋರಾಟಕ್ಕೂ ನವ್ಯೋತ್ತರ ಸಾಹಿತ್ಯಕ್ಕೂ ಇರುವ ಸಂಬಂಧವೇನು?’’ ಸಭೆಯಲ್ಲಿ ಕೆಲ ವ್ಯಂಗ್ಯದ ಮುಗುಳು ನಗೆಗಳು ತೇಲಿ ಹೋದವು. ಗೆಳೆಯರು ಜಾಣತನದಿಂದ ಈ ಪ್ರಶ್ನೆ ತಾನು ಮಾತನಾಡಿದ ವಿಷಯದ ಹೊರಗಿನದೆಂದು ಹೇಳಿಕೊಂಡು ಕುಳಿತುಕೊಂಡರು. ಹಿರಿಯರು ನಿಂತೇ ಇದ್ದರು.

“ಇಲ್ಲ, ನನಗೆ ನಿಮ್ಮ ಉತ್ತರದಿಂದ ಸಮಾಧಾನವಾಗಲಿಲ್ಲ. ನೀವು ಈ ವಿಷಯದ ಕುರಿತು ಮಾತನಾಡಿರದಿದ್ದರೆ ಏನಂತೆ? ಈಗ ಯೋಚನೆ ಮಾಡಿ ಉತ್ತರ ಹೇಳಬಹುದಲ್ಲ, ನೀವು ಸಾಹಿತಿಗಳು, ಭಾರತದ ಸ್ವಾತಂತ್ರ್ಯ ಹೋರಾಟವನ್ನು ಅಷ್ಟು ಲಘುವಾಗಿ ಕಾಣಬಹುದೆ?’’

ಪ್ರಶ್ನೆ ಕೇಳಿದ ಹಿರಿಯರ ಧ್ವನಿಯಲ್ಲಿ ಆರ್ತತೆಯಿತ್ತು, ಸಹಜತೆಯಿತ್ತು. ಈಗ ನನ್ನ ಪ್ರವೇಶ ಅನಿವಾರ್ಯವಾಯಿತು. ನಾನು, ‘‘ತಮ್ಮ ಈ ಪ್ರಶ್ನೆ ತುಂಬ ಗಹನವಾದುದು, ಈ ಕುರಿತು ಯಾರೂ ಲಘುವಾಗಿ ಮಾತನಾಡುತ್ತಿಲ್ಲ, ಸ್ವಾತಂತ್ರ್ಯ ಹೋರಾಟಕ್ಕೆ ಮತ್ತು ಸಾಹಿತ್ಯಕ್ಕೆ ಅನ್ಯೋನ್ಯವಾದ ಸಂಬಂಧವಿದೆ...’’ ಮುಂತಾಗಿ ಇನ್ನೇನೋ ಹೇಳಬೇಕೆನ್ನುವಾಗ, “ಹಾಗೆ ಹೇಳಿ ಮತ್ತೆ’’ ಎನ್ನುತ್ತ ಸಮಾಧಾನದಿಂದ ಕುಳಿತುಕೊಂಡರು. ಸಭೆ ಮುಂದುವರಿಯಿತು.